

**ಜನಪದರ ಹಬ್ಬಗಳು ವ್ಯವಸಾಯ ಮತ್ತು ಪ್ರಕೃತಿಯೊಂದಿಗೆ ಸಂಬಂಧ ಹೊಂದಿವೆ. ನವರಾತ್ರಿಯು ದೀಪಾವಳಿಯ ಹಿಂದಿನ ದಿನಗಳಲ್ಲೆ ಬರುತ್ತದೆಯಾದರೂ ಅದು ಜನಪದರಲ್ಲಿ ನಿಜ ಉತ್ಸಾಹದ ಹಬ್ಬವಾಗಿ ಆಚರಣೆಗೊಳ್ಳುವುದಿಲ್ಲ. ಕಳೆದ ದಶಕಗಳಲ್ಲಿ ಆಯುಧಪೂಜೆಯ ಆಚರಣೆ ಹಳ್ಳಿಗಳಲ್ಲೇನೂ ಇರಲಿಲ್ಲ. ಅದು ಅರಮನೆಗಳಲ್ಲಿ ಆಯುಧಗಳು, ಯುದ್ಧದ ಕುದುರೆ, ಆನೆಗಳು ಮತ್ತು ಸೈನಿಕರ ವಿಜೃಂಭಣೆಯ ಮೆರವಣಿಗೆ ಮತ್ತು ಬಲಿ ಆಚರಣೆಗಷ್ಟೇ ಸೀಮಿತವಾಗಿತ್ತು.**

ಕೂತು ಬಿಲ್ಲು ಹಿಡಿದು ಹಾರುತ್ತಿದ್ದ ಪಕ್ಷಿಗೆ ಗುರಿಯಿಟ್ಟು ಹೊಡೆದನಂತೆ. ಈ ಆಚರಣೆಯನ್ನು ಗಮನಿಸಿದರೆ ವಿಜಯನಗರದ ಅರಸರು ಹೀಗೆಯೇ ಬಿಲ್ಲಿಗೆ ಬಾಣವನ್ನು ಹೂಡಿಬಿಟ್ಟು ಅದು ಹೋದ ದಿಕ್ಕು ಮುಸ್ಲಿಮ್ ರಾಜ್ಯಗಳಾಗಿ, ಅತ್ತ ದಾಳಿ ಮಾಡಿ ತಾವು ಜಯ ಸಾಧಿಸಬೇಕೆಂದು ತಿಳಿಯುತ್ತಿದ್ದುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಎಲ್ಲ ವಿವರಗಳಿಂದ ದಸರಾ ಉತ್ಸವ ಗ್ರಾಮೀಣ ಹಬ್ಬ ಎನ್ನುವುದಕ್ಕಿಂತ, ಅರಮನೆಗಳು ಮುಂಬರುವ ಅಥವ ಅವರು ಎದುರಿಸಬೇಕಾಗಿದ್ದ ಯುದ್ಧಸಿದ್ಧತೆಯ ಪೂರ್ವತಯಾರಿ ಎನಿಸುತ್ತದೆ. ಆಯುಧ ಪೂಜೆಯ ಸಂದರ್ಭದ ಅಸಂಖ್ಯಾತ ಪ್ರಾಣಿಬಲಿಗಳು ಸಹ ಪರಾಕ್ರಮಿಗಳಾದವರು ರಕ್ತಕ್ಕೆ, ಬಲಿಗೆ, ಸಾವಿಗೆ ಹೆದರಬಾರದು ಎಂಬುದನ್ನು ಸೂಚಿಸುತ್ತದೆ.

ಅರಮನೆಗೆ ಸೀಮಿತವಾಗಿದ್ದ ಆಯುಧ ಪೂಜೆ ಇದೀಗ ಗ್ರಾಮಾಂತರ ಪ್ರದೇಶಕ್ಕೆ ಹಬ್ಬಿ ಕಾರು, ಬೈಕು, ಸ್ಕೂಟರು, ಸೈಕಲುಗಳನ್ನು ಪೂಜಿಸುವ ಹಂತಕ್ಕೆ ತಲುಪಿದೆ.

* * *

ಮೈಸೂರು ದಸರಾವನ್ನು ಹಳಗನ್ನಡ ಕವಿಗಳು ವರ್ಣಿಸಿದಂತೆ ಹೊಸಗನ್ನಡ ನವೋದಯ ಕಾಲದ ಮೈಸೂರಿನ ಕವಿಗಳು ವರ್ಣಿಸುವುದರಲ್ಲಿ ಹಿಂದೆ ಬಿದ್ದಿಲ್ಲ. ಕಳೆದ ಶತಮಾನದ ಅರಮನೆಯ ಅರಸರ ಆಡಳಿತ ವೈಖರಿಯನ್ನು ಮೆಚ್ಚಿಕೊಂಡಿದ್ದ ಕವಿ ಬಿ.ಎಂ.ಶ್ರೀ. ಅವರು–

ಅಲ್ಲೊಬ್ಬ ನಮಗಿಹನು ನಾಯಕನು;
ನಿಲು ನಿಲುಕಿ ಕಣ್‌ತುಂಬ ನೋಡುತ್ತಿರಲು,
ಆನೆಯಂಬಾರಿಯಲ್ಲಿ ನಸುನಗೆಯನಿಕ್ಕೆಲ ಬೀರಿ
ಜನರಕ್ಕರೆಯನುಕ್ಕಿಸುವನು
ಎಂದರೆ,

ಶ್ರೀನಿವಾಸಾಚಾರ್ಯ ಎಂಬುವರು–

ಮಹಿಶೂರ ರಾಜರವರ ಮೆರವಣಿಗೆಯ ವೈಖರಿ
ನೋಡೇ ಲಕ್ಷಗಟ್ಲೆ ಜನರು ಸಾಲುಗಟ್ಟಿ ನಿಲುವರು
ಆನೆಯೊಂಟೆ ರಾಜರಥವು ಅಶ್ವಸೈನ್ಯ ಕಾಲ್ಬಲ
ಒಂದು ಮೈಲಿವರೆಗೂ ಹರಡಿ ನಡೆವ ಶೀವಿ ನೋಡಿರಿ...

ಎಂದಿದ್ದರೆ, ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು

ಹೇಮಾಲಂಕೃತ ಕರಿಗಳ ಹಿಂದೆ,
ಹೊರಟಿತು ಅಶ್ವಾರೋಹಕ ಮುಂದೆ
ವಿಜಯಕೆ ತೆರಳುವ ಸೈನ್ಯದ ವೋಲ್
ಕುಣಿಕುಣಿಯುವ ಆ ಹಯಸಂತತಿಯನು
ರಣರವರಾಜದ್‌ರಥಿನೀಪತಿಯನು
ಶಸ್ತ್ರ ಸುಸಜ್ಜಿತ ಪದಾತಿ ದಳಗಳು
ಹಿಂಬಾಲಿಸಿದವು ಒಂದನು ಒಂದು
ಎನ್ನುತ್ತಾರೆ.

ಹೀಗೆ ರಾಜನು ಬನ್ನಿ ವೃಕ್ಷದ ಕಡೆಗೆ ಆನೆಯನ್ನೇರಿ ಮೆರವಣಿಗೆಯಲ್ಲಿ ಹೊರಟು ತಿರುಗಿ ಬರುವಾಗ ಬಿಳಿಯ ಕುದುರೆಯನ್ನೇರಿ ವಾಪಸ್ಸಾಗುವುದು ಕೂಡ ಒಂದು ಸೊಗಸು ಎನ್ನುತ್ತಾರೆ ವಿದ್ವಾಂಸರು, ಕವಿಗಳು. ಮೇಲಿನ ಪದ್ಯಗಳು ಅರಮನೆಯ ಅರಸರ ವೈಭವವನ್ನು ಹೇಳುತ್ತವೆ ಸರಿ; ಆದರೆ ಆ ವಾಕ್ಯಗಳು ಕಾವ್ಯವಾಗದೆ ವಾಚ್ಯರೂಪದ ಕೊಂಡಾಟದ ಗದ್ಯ ಸಾಲಿನಂತಿವೆ. ಅದೇ ಸಂದರ್ಭದಲ್ಲಿ ಮೈಸೂರಿನಲ್ಲಿ ಇದ್ದಿರಬಹುದಾದ ಕವಿ ಗೋಪಾಲಕೃಷ್ಣ ಅಡಿಗರು ಪ್ರಭುತ್ವ ನೇತೃತ್ವದ ಈ ದಸರಾವನ್ನು ಪ್ರಜಾಪ್ರಭುತ್ವದ ಹಿನ್ನೆಲೆಯಲ್ಲಿ ನೋಡಬಯಸಿ ಬರೆದ 'ಮೈಸೂರಿನಲ್ಲಿ ದಸರೆ' ಪದ್ಯ ಹೀಗಿದೆ:

... ಶೂನ್ಯ ಸಿಂಹಾಸನ ಏರುವಾತನು ಯಾರು?
... ಬರಬಹುದು, ಬರುವನೇ ವಿವೇಕ ಭೂಪಾಲ?
ಆಗಲೇ ಮೈಸೂರು ಸರ್ವಥಾ ಸ್ವಸ್ಥ;
ಹೊಸ ತಾರತಮ್ಯಕ್ಕೆ ಪ್ರಾಣ ಪ್ರತಿಷ್ಠೆ;
ಮಾನವತ್ವಕ್ಕೆ ತೋರುವುದು ಹೊಸ ಬಟ್ಟೆ,
ಆಗ ಮಾತ್ರವೇ ಸಾರ್ಥಕ ನವ ವಿಜಯದಶಮಿ
ಇಲ್ಲವಾದರೆ ನಮ್ಮ ಮೈಸೂರು ದಸರೆ
ವ್ಯರ್ಥ ಹಳವಂಡಕ್ಕೆ ಇನ್ನೊಂದು ಹೆಸರೇ...

ಇದೀಗ ಸರ್ಕಾರವೇ ದಸರಾವನ್ನು ನಡೆಸುತ್ತಿದ್ದರೂ, ಅಲ್ಲಿಯೂ ಪರೋಕ್ಷವಾಗಿ ಅಧಿಕಾರಶಾಹಿ ಆನೆ, ಕುದುರೆ ಹತ್ತದಿದ್ದರೂ, ಮಾನಸಿಕವಾಗಿ ಅವುಗಳ ಮೇಲೆಯೇ ಕೂತು ಸವಾರಿ ಮಾಡುತ್ತದೆ ಎಂಬುದರ ಸೂಕ್ಷ್ಮ ಸಂಗತಿಯನ್ನು ತಮ್ಮ 'ಚಿಂತಾಮಣಿಯಲ್ಲಿ ಕಂಡ ಮುಖ' ಸಂಕಲನದ ಪದ್ಯದಲ್ಲಿ ನಿರೂಪಿಸುತ್ತಾರೆ.

ಗ್ರಾಮೀಣರು ಈ ಮಹಾನವಮಿ, ನವರಾತ್ರಿ ತಿಂಗಳಿಗೆ ಅನುಗುಣವಾಗಿ ಹಾಡಿಕೊಂಡಿರುವ ಈ ಕೆಳಗಿನ ಪದ್ಯ ಎಲ್ಲವನ್ನು ದಾಟಿ ಭೂಮಿಯ ಸಮೃದ್ಧಿಯನ್ನು ಹೇಳುವ ಧಾಟಿಯಲ್ಲಿದೆ:

ಮಳೆ ಬಂದು ಬೆಳೆ ಬೆಳೆದು ಇಳೆ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋವ್ಗಳು ಕರೆಯಲೆಂದು
ನಳಿನಮುಖಿಯರು ಸುಪುತ್ರರ ಪಡೆಯಲೆಂದು
ಗೆಲವಿಂದ ಹರಸಿದೆವು ಬಾಲಕರು ಬಂದು.

ಇದು ಕರ್ನಾಟಕದ ಬಹುಭಾಗಗಳಲ್ಲಿ ಹಾಡಿಕೊಳ್ಳುವ ಪದ್ಯ. ಈ ಪದ್ಯ ಮಾದರಿಯನ್ನು ನೋಡುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ಅಕ್ಷರ ಬಲ್ಲವರೇ ರಚಿಸಿರುವಂತಿದೆ. ಪುಣ್ಯಕೋಟಿ ಗೋವಿನ ಕಥೆಯಂತೆ ಈ ಪದ್ಯ ಎಲ್ಲೆಡೆ ಪ್ರಚಲಿತವಿದ್ದು ಅರಮನೆಯ ಆನೆ, ಕುದುರೆ ಮತ್ತು ರಾಜರ ವೈಭವ ವಿವರಗಳನ್ನು ಹೇಳದೆ ಇಡೀ ಭೂಮಂಡಲದ ಕ್ಷೇಮವನ್ನು ಬಯಸುವಂತಿದೆ. ಇಷ್ಟಾಗಿ ಶತಮಾನಗಳಿಂದ ನವರಾತ್ರಿ ಉತ್ಸವಗಳಲ್ಲಿ ಭಾಗವಹಿಸಿಕೊಂಡು ಬಂದ ಆನೆ, ಕುದುರೆ ಸಮೂಹಗಳು ತಮ್ಮ ಮುಗ್ಧತೆ, ಕೃತಜ್ಞತೆ, ನಿಷ್ಠೆಯಿಂದ ಬೆನ್ನ ಮೇಲೆ ರಾಜರನ್ನೋ, ದೇವತೆಯನ್ನೋ 'ಹೊರು' ಎಂದರೆ ಹೊತ್ತು ನಡೆಯುತ್ತ ಮನುಷ್ಯಪ್ರಾಣಿಗಳ ಗೌರವವನ್ನು ಉಳಿಸುತ್ತಲೇ ಬಂದಿವೆ ಎಂಬುದನ್ನೂ ನಾವು ನೆನೆಯಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in